# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 24-03-2018ರಂದು **ಪೂರ್ವಾಹ್ನ 11-00 ಗಂಟೆಗೆ ಜರುಗಿದ ಸಿಂಡಿಕೇಟಿನ ವಿಶೇಷ ಸಭೆಯ ನಡವಳಿಗಳು.**

ಹಾಜರಿದ್ದ ಸದಸ್ಯರು:

1. ಪ್ರೊ. ಬಸವರಾಜು ಪಿ. – ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು
2. ಡಾ. ನಿಂಗಮ್ಮ ಸಿ.ಬೆಟ್ಸೂರ್ – ಸದಸ್ಯರು
3. ಪ್ರೊ. ಎಸ್.ಎಲ್.ಸುರೇಶ್ – ಸದಸ್ಯರು
4. ಡಾ. ಎ.ಟಿ.ಶಿವರಾಮು – ಸದಸ್ಯರು
5. ಶ್ರೀಮತಿ ಎಂ.ಎನ್.ಪೊನ್ನಮ್ಮ – ಸದಸ್ಯರು
6. ಶ್ರೀ ಕೆ.ಎಂ.ಕಾಳೇಗೌಡ – ಸದಸ್ಯರು
7. ಪ್ರೊ. ಡಿ. ನಂಜುಂಡಯ್ಯ – ಸದಸ್ಯರು
8. ಶ್ರೀ ಲಯನ್ ಹೆಚ್. ರಮೇಶ್ – ಸದಸ್ಯರು
9. ಶ್ರೀ ಮಹಮದ್‌ಅಬ್ದುಸ್ಸಲಾಂ – ಸದಸ್ಯರು
10. ಶ್ರೀ ಕುಮಾರ್ – ಸದಸ್ಯರು
11. ಕು. ಸಹನಾ ಶಿವಪ್ಪ, – ಸದಸ್ಯರು
12. ಶ್ರೀ ಎಂ.ಎಸ್.ಎಸ್. ಕುಮಾರ್ – ಸದಸ್ಯರು
13. ಪ್ರೊ. ಜೆ. ಸೋಮಶೇಖರ್ – ಸದಸ್ಯರು
    ಕುಲಸಚಿವ(ಪರೀಕ್ಷಾಂಗ) – ಸದಸ್ಯರು
14. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಹಾಜರಾಗದ ಸದಸ್ಯರು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಶ್ರೀಮತಿ ಶೃತಿ ತರುಣ್‌ಗಿರಿ ಸಿಂಡಿಕೇಟ್ ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ವಿಶೇಷ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿದರು.

ಮುಂದುವರೆದು, ವಿಶೇಷ ಸಿಂಡಿಕೇಟ್ ಸಭೆ ಕರೆದಿರುವ ವಿಚಾರವನ್ನು ಪ್ರಸ್ತಾಪಿಸಿದ ನಂತರ ಕಾರ್ಯಸೂಚಿಯನ್ನು ಕೈಗೆತ್ತಿಗೊಳ್ಳಲಾಯಿತು.

| | |
|---|---|
| **Spl.Syn. 2018/3.1** | 2017-18ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚ ಶೀರ್ಷಿಕೆಗಳಲ್ಲಿ ಮರು ಹೊಂದಾಣಿಕೆ **(Re-appropriation IQAC)** ಬಗ್ಗೆ. |
| ತೀರ್ಮಾನ | 2017-18ನೇ ಸಾಲಿನ ಆಯವ್ಯಯ ಅಂದಾಜುಗಳ ವೆಚ್ಚ ಶೀರ್ಷಿಕೆಗಳಲ್ಲಿ ವಿವಿಧ ವಿಭಾಗಗಳಿಗೆ ಅವಶ್ಯಕವಾಗಿ ಬೇಕಾಗಿರುವ ಹೆಚ್ಚುವರಿ ಮೊತ್ತದ ಬಗೆಗೆ ಕೂಲಂಕಷವಾಗಿ ಪರಿಶೀಲಿಸಿದ ಸಭೆಯು ಸದರಿ ಸಾಲಿನ ಹೆಚ್ಚುವರಿ ವೆಚ್ಚವನ್ನು ವರ್ಷಾಂತ್ಯದಲ್ಲಿ ಉಳಿತಾಯವಾಗಲಿರುವ ಇತರೆ ವೆಚ್ಚ ಶೀರ್ಷಿಕೆಗಳ ಮೊತ್ತಗಳಿಂದ ಈ ಕೆಳಕಂಡಂತೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |

| ಕ್ರ ಸಂ. | ವಿಭಾಗ/ ಸಂಸ್ಥೆ | ಲೆಕ್ಕ ಶೀರ್ಷಿಕೆ ವಿವರ | 2017-18ರ ಆಯವ್ಯಯ ಅಂದಾಜು (ರೂ) | 2017-18ರ ಪರಿಷ್ಕೃತ ಆಯವ್ಯಯ ಅಂದಾಜು (ರೂ) | ಹೆಚ್ಚುವರಿ (ರೂ.) |
|---|---|---|---|---|---|
| 1 | ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ ವಿಶೇಷ ಘಟಕ | 154 –ಉತ್ತಮೀಕರಣ | 2,20,00,000-00 | 4,80,30,000-00 | 2,60,30,000-00 |
| 2 | ರೇಷ್ಮೆ ಕೃಷಿ ಅಧ್ಯಯನ ವಿಭಾಗ | 174- ಹಿಪ್ಪು ನೇರಳೆ ಸಾಕಾಣಿಕೆ ಮತ್ತು ತೋಟಗಾರಿಕೆ ನಿರ್ವಹಣೆ | 20,000-00 | 50,000-00 | 30,000-00 |
| 3 | ಅಭಿವೃದ್ಧಿ ಅಧ್ಯಯನ ವಿಭಾಗ | 115- ಕಛೇರಿ ಸಾದಿಲ್ವಾರು | 10,000-00 | 25,000-00 | 15,000-00 |
| 4 | ಭದ್ರತಾ ಸಿಬ್ಬಂದಿ | 263 - ಭದ್ರತಾ ಸೇವೆ | 2,25,00,000-00 | 2,75,00,000-00 | 50,00,000-00 |

| | |
|---|---|
| Spl.Syn. 2018/3.2 | 2018-19ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳು |
| ತೀರ್ಮಾನ | 2018-19ನೇ ಸಾಲಿನ ಕರಡು ಆಯವ್ಯಯ ಅಂದಾಜುಗಳನ್ನು ಅನುಮೋದಿಸಲಾಯಿತು. ಹಾಗೂ ಶಿಕ್ಷಣ ಮಂಡಳಿಯ ಸಭೆಯಲ್ಲಿ ಇದರ ವರದಿಯನ್ನು ಮಂಡಿಸಲು ಮಾನ್ಯ ಸದಸ್ಯರಾದ ಡಾ. ನಿಂಗಮ್ಮ ಸಿ.ಬೆಟ್ಸೂರ್ ಅವರ ಹೆಸರನ್ನು ಸಿಂಡಿಕೇಟ್ ಸೂಚಿಸಿತು. |
| Spl.Syn. 2018/3.3 | ಡಾ.ಕೆ.ಎ.ರವೀಶ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಕೆ.ಎ.ರವೀಶ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರು 32 ವರ್ಷಗಳ ಕಾಲ ಸೇವೆ ಸಲ್ಲಿಸಿ ದಿನಾಂಕ 28-02-2018ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ವಯೋನಿವೃತ್ತಿ ಹೊಂದಿದ್ದು ಹಾಗೂ IQAC ನಿರ್ದೇಶಕರಾಗಿರುವುದರಿಂದ, ಇವರ ನಿವೃತ್ತಿಯಿಂದ ಯಾವುದೇ ನೇಮಕಾತಿ ಪ್ರಕ್ರಿಯೆಗಳು ನಡೆದಿರುವುದಿಲ್ಲದರ ಪ್ರಯುಕ್ತ, ವಿಭಾಗದ ಪರಿಷತ್ತಿನ ಸದರಿಯವರ ಕೋರಿಕೆ ಮೇರೆಗೆ, ಮಾಹೆಯಾನ ರೂ.25,000/-ರಂತೆ ಕ್ರೋಢೀಕೃತ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಸದರಿ ವಿಭಾಗಕ್ಕೆ ಒಂದು ವರ್ಷದ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ನೇಮಕ ಮಾಡಿಕೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| Spl.Syn. 2018/3.4 | ಡಾ. ನಿರಂಜನ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಹೆಸರನ್ನು Director, Indian Cultural Centre, Dushanbe ಹುದ್ದೆಗೆ Indian Council for Cultural Relations ಅವರು ಶಿಫಾರಸ್ಸು ಮಾಡಿರುವ ಸಂಬಂಧ Cadre Clearance ನೀಡಬೇಕೆಂದು Ministry of External Affairs, Government of India ಇವರು ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ನಿರಂಜನ, ಪ್ರಾಧ್ಯಾಪಕರು, ಇವರಿಗೆ Director, Indian Cultural Centre, Dushanbe ಹುದ್ದೆಗೆ Cadre Clearance ನೀಡುವುದರ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಚರ್ಚಿಸಿ ನಿರ್ಧರಿಸಲು ಸಂಬಂಧಪಟ್ಟ ಎಲ್ಲಾ ನಿಯಮಗಳೊಂದಿಗೆ ಮುಂದಿನ ಸಭೆಗೆ ವಿಷಯವನ್ನು ಮಂಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| Spl.Syn. 2018/3.5 | 1998-89 ರಿಂದ 2013-14ನೇ ಸಾಲಿನವರೆಗೆ ಅತಿಥಿ ಉಪನ್ಯಾಸಕರುಗಳು ದಿನಗೂಲಿ/ ಸಂಚಿತ ವೇತನದಡಿಯಲ್ಲಿ ತಾತ್ಕಾಲಿಕ ಬೋಧಕ/ ಬೋಧಕೇತರ ನೌಕರರುಗಳಿಗೆ ಸಂಭಾವನೆ ಪಾವತಿಸಿರುವ ಬಗ್ಗೆ. |
| ತೀರ್ಮಾನ | 1999-2000 ರಿಂದ 2014-15ನೇ ಸಾಲಿನವರೆಗೆ ಪರೀಕ್ಷಾ ಕಾರ್ಯಗಳಿಗಾಗಿ ಬೋಧಕ/ ಬೋಧಕೇತರ ನೌಕರರುಗಳಿಗೆ ಪರೀಕ್ಷಾ ಸಂಭಾವನೆ ಮತ್ತು ಭತ್ಯೆಗಳನ್ನು ಪಾವತಿಸಿರುವ ಬಗ್ಗೆ ಆಕ್ಷೇಪಿಸಿರುವ 22 ಕಂಡಿಕೆಗಳ ಒಟ್ಟು ಮೊತ್ತ ರೂ. 5,53,16,099/- ಗಳಿಗೆ ಕರ್ನಾಟಕದ ವಿಧಾನ ಮಂಡಲದ ಕಾಗದ ಪತ್ರಗಳ ಸಮಿತಿ ಸಭೆಯ ನಿರ್ದೇಶನದ ಮೇರೆಗೆ, ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಗೆ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯವರಿಂದ ವಿನಾಯಿತಿ ದೊರಕಿಸಿ ಕೊಡುವ ಪ್ರಸ್ತಾವನೆಯನ್ನು ಹಣಕಾಸು ಸಮಿತಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| Spl.Syn. 2018/3.6 | 1988–89 ರಿಂದ 2013–14ನೇ ಸಾಲಿನವರೆಗೆ ಅತಿಥಿ ಉಪನ್ಯಾಸಕರುಗಳು ದಿನಗೂಲಿ/ ಸಂಚಿತ ವೇತನದಡಿಯಲ್ಲಿ ತಾತ್ಕಾಲಿಕ ಬೋಧಕ/ ಬೋಧಕೇತರ ನೌಕರರುಗಳಿಗೆ ಸಂಭಾವನೆ ಪಾವತಿಸಿರುವ ಬಗ್ಗೆ. |
| ತೀರ್ಮಾನ | 1988–89ರಿಂದ 2013–14ನೇ ಸಾಲಿನವರೆಗೆ ಅತಿಥಿ ಉಪನ್ಯಾಸಕರುಗಳು ಮತ್ತು ದಿನಗೂಲಿ/ ಸಂಚಿತ ವೇತನದಡಿಯಲ್ಲಿ ತಾತ್ಕಾಲಿಕ ಬೋಧಕ/ ಬೋಧಕೇತರ ನೌಕರರುಗಳಿಗೆ ಸಂಭಾವನೆ ಬಗ್ಗೆ ಆಕ್ಷೇಪಿಸಿರುವ 39 ಕಂಡಿಕೆಗಳ ಒಟ್ಟು ಮೊತ್ತ ರೂ. 21,31,94,513/- ಗಳಿಗೆ ಕರ್ನಾಟಕದ ವಿಧಾನ ಮಂಡಲದ ಕಾಗದ ಪತ್ರಗಳ ಸಮಿತಿ ಸಭೆಯ ನಿರ್ದೇಶನದ ಮೇರೆಗೆ, ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಗೆ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯವರಿಂದ ವಿನಾಯಿತಿ ದೊರಕಿಸಿ ಕೊಡುವ ಪ್ರಸ್ತಾವನೆಯನ್ನು ಹಣಕಾಸು ಸಮಿತಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

ಇತರೆ ವಿಷಯಗಳು:

1. ಈಗಾಗಲೇ ಸಂಶೋಧನಾ ಕಾರ್ಯವನ್ನು 3 ವರ್ಷಗಳು ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯನ್ನು ವಾರ್ಷಿಕ ಪ್ರಗತಿ ವರದಿಗಳೊಂದಿಗೆ ನಿಯಮಾನುಸಾರ ಪೂರೈಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಷರತ್ತು ಹಾಗೂ ನಿಬಂಧನೆಗಳೊಡನೆ ಲ್ಯಾಪ್‌ಟಾಪ್ ಅನ್ನು ವಿಶ್ವವಿದ್ಯಾನಿಲಯದಿಂದ ವಿತರಿಸಲು ಸಿಂಡಿಕೇಟ್ ತೀರ್ಮಾನಿಸಿತು.

2. ಯು.ಜಿ.ಸಿ ಪೋಸ್ಟ್ ಡಾಕ್ಟರಲ್ ಫೆಲೋಷಿಪ್ ಅಭ್ಯರ್ಥಿಗಳ ಹಿಂಬಾಕಿ ಶಿಷ್ಯವೇತನ ರೂ.1,53,11,996-00 ಮೊಬಲಗನ್ನು (ಒಂದು ಕೋಟಿ ಐವತ್ತಮೂರು ಲಕ್ಷದ ಹನ್ನೊಂದು ಸಾವಿರದ ಒಂಬೈನೂರ ತೊಂಬತ್ತಾರು ರೂಗಳು) ಯುಜಿಸಿ ಯಿಂದ ಬರುವ ಅನುದಾನವನ್ನು ಕಾಯ್ದಿರಿಸಿ ಪಾವತಿಸಲು ಹಾಗೂ ಸಹೋದ್ಯಮ ಖಾತೆಯಿಂದ ರೂ.1,50,00,000-00 ಮೊಬಲಗನ್ನು ಎಸ್.ಪಿ.ಎಸ್ ಖಾತೆಗೆ ವರ್ಗಾವಣೆ ಮಾಡಿಕೊಂಡು ಪಿ.ಡಿ.ಎಫ್ ಶಿಷ್ಯವೇತನವನ್ನು ಪಾವತಿಸಿ, ಯುಜಿಸಿ ಯಿಂದ ಶಿಷ್ಯವೇತನದ ಅನುದಾನವನ್ನು ಬಿಡುಗಡೆಯಾದ ನಂತರ ಸಹೋದ್ಯಮ ಖಾತೆಗೆ ಮರುಭರಿಕೆ ಮಾಡಿಕೊಳ್ಳಲು ದಿನಾಂಕ 17-03-2018 ರಂದು ನಡೆದ ಹಣಕಾಸು ಸಮಿತಿ ತೀರ್ಮಾನದಲ್ಲಿ ಒಪ್ಪಲಾಗಿರುವುದನ್ನು, ಸಿಂಡಿಕೇಟ್ ಸಭೆಯು ಅನುಮೋದಿಸಿತು.

3. ಮಾನ್ಯ ಕುಲಪತಿಯವರು ಏಪ್ರಿಲ್ ತಿಂಗಳ ಮೊದಲನೇ ವಾರದಲ್ಲಿ 6 ದಿನಗಳ ಕಾಲ ಚೀನಾ ದೇಶಕ್ಕೆ ಭೇಟಿ ನೀಡಲು ಸಿಂಡಿಕೇಟ್ ಅನುಮತಿಸಿತು.

4. ಮೈಸೂರು ನಗರದ ಕುರುಬಾರಹಳ್ಳಿಯಲ್ಲಿರುವ ವಿಶ್ವವಿದ್ಯಾನಿಲಯದ ಜಮೀನಿಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿನ ಸಿವಿಲ್ ಅಪಿಲ್ ಸಂಖ್ಯೆ:170-173/2011 ಪ್ರಕರಣದ ಅಂತಿಮ ವಿಚಾರಣೆಯ ತೀರ್ಪು ದಿನಾಂಕ 20-02-2018ರಂದು ನಡೆದು ವಿಶ್ವವಿದ್ಯಾನಿಲಯದ ಪರವಾಗಿ ಬಂದಿರುವುದರಿಂದ ಈ ಯಶಸ್ಸಿನ ಕಾರ್ಯಕ್ಕೆ ಭಾಗಿಯಾದ ಕುಲಸಚಿವರಾದ ಶ್ರೀಮತಿ ಭಾರತಿ ಡಿ. ಕೆ.ಎ.ಎಸ್., ಜಿಲ್ಲಾಡಳಿತಕ್ಕೆ ಹಾಗು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ಸಿಂಡಿಕೇಟ್ ಅಭಿನಂದಿಸಿತು.

ಕೊನೆಯಲ್ಲಿ ಮಾನ್ಯ ಕುಲಪತಿಗಳು, ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೂ ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು 24/3/18.